**ದಿನಾಂಕಃ 16-12-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲುಃ ವಾದಿ ಪರ ಶ್ರೀ.ಬಿ.ಎನ್.ಎಂ.ವಕೀಲರಿಂದಃ**

ನಮ್ಮ ಕುಟುಂಬದ ಮೂಲ ಪುರುಷ ಮುದುಕಪ್ಪ ಹಾಲಬಾವಿ ಎಂದರೆ ಸರಿ. ನನ್ನ ತಾಯಿಯವರ ಹೆಸರು ಶ್ರೀಮತಿ ಪಾರ್ವತಮ್ಮ ಎಂದರೆ ಸರಿ. ನಮ್ಮ ತಂದೆ-ತಾಯಿಯವರಿಗೆ 1 ರಿಂದ 3 ನೇ ಪ್ರತಿವಾದಿಗಳು ಮೂರು ಜನ ಗಂಡು ಮಕ್ಕಳು ಹಾಗೂ 5 ಜನ ಹೆಣ್ಣುಮಕ್ಕಳು ಎಂದರೆ ಸರಿ. ಪ್ರತಿವಾದಿ 4 ರಿಂದ 8 ರವರು 5 ಜನ ಹೆಣ್ಣುಮಕ್ಕಳು ಆಗಿರುತ್ತಾರೆ ಎಂದರೆ ಸರಿ. 1 ರಿಂದ 4 ನೇ ವಾದಿಗಳು 3 ನೇ ಪ್ರತಿವಾದಿಯವರ ಮಕ್ಕಳು ಎಂದರೆ ಸರಿ. ನನ್ನ ತಂದೆ ಬದುಕಿರುವವರೆಗೂ ಮನೆಯ ವ್ಯವಹಾರವನ್ನೆಲ್ಲಾ ಅವರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು 1991 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದಿದ ನಂತರ ನಾನು ಮತ್ತು 2 ನೇ ಪ್ರತಿವಾದಿಯವರು ನಮ್ಮ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದೇವು. 1985 ನೇ ಇಸವಿಯಲ್ಲಿ ಬಸವನಗೌಡ ಮದುವೆಯಾದ ನಂತರ ಅವನು ಅವರ ಹೆಂಡತಿ ಮನೆಯ ಆಸ್ತಿ ನೋಡಿಕೊಳ್ಳಲು ಹೋಗಿರುತ್ತಾನೆ.

ನಮ್ಮ ತಂದೆ ತೀರಿಕೊಂಡ ನಂತರ 1 ರಿಂದ 3 ನೇ ಪ್ರತಿವಾದಿಯವರ ನಡುವೆ ಯಾವುದೇ ಲಿಖಿತವಾದ ಪಾಲು ವಿಭಾಗವಾಗಿರುವುದಿಲ್ಲ ಎಂದರೆ ಸರಿ. ಈ ಕೇಸಿನಲ್ಲಿ ನಮ್ಮ ವಕೀಲರು ಏನು ತಕರಾರು ಹಾಕಿರುತ್ತಾರೆ ಎಂದು ನಾನು ತಿಳಿದು ಕೊಂಡಿರುತ್ತೇನೆ. ಆ ತಕರಾರು ಹಾಕಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. 1979 ನೇ ಇಸವಿಯಲ್ಲಿ ನನ್ನ ಮತ್ತು 2 ನೇ ಪ್ರತಿವಾದಿಯವರ ಮದುವೆಯಾಗಿರುತ್ತದೆ. 3 ನೇ ಪ್ರತಿವಾದಿಯವರ ಮದುವೆ 1985-86 ನೇ ಇಸವಿಯಲ್ಲಿ ಆಗಿರಬಹುದು. ದಿಃ 18-05-1987 ರಂದು 3 ನೇ ಪ್ರತಿವಾದಿಯವರ ಮದುವೆಯಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ವಾದಿಯನ್ನು ನೆಗಳೂರಿನ ಪತ್ರಿಯವರ ಮನೆಗೆ ವಿವಾಹ ಮಾಡಿ

ಕೊಟ್ಟಿರುತ್ತೇವೆ. 1 ನೇ ವಾದಿಯವರ ಮದುವೆಯನ್ನು ನಾನೇ ಮುಂದು ನಿಂತು ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು ಬಂಗಾರ ಮಾತ್ರ ಕೊಡಿಸಿರುತ್ತೇನೆ ಎಂದು ಹೇಳುತ್ತಾರೆ. ಮದುವೆಯ ಮಾತುಕತೆ ಮಾಗೋಡ ಗ್ರಾಮದ ನಮ್ಮ ಮನೆಯಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 22-10-2008 ರಂದು 1 ನೇ ವಾದಿಯವರ ನಿಶ್ಚಿತಾರ್ಥ ಕಾರ್ಯಕ್ರಮ ಮಾಗೋಡ ಗ್ರಾಮದ ನಮ್ಮ ಮನೆಯಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಮದುವೆ ಮಾತುಕತೆ ಮಾಗೋಡ ಗ್ರಾಮದಲ್ಲೆ ಆಗಿದ್ದು ನಾನೂ ಸಹ ಆ ಮದುವೆ ಮಾತುಕತೆಯಲ್ಲಿ ಭಾಗವಹಿಸಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ 1985 ನೇ ಇಸವಿಯಲ್ಲಿ ತನ್ನ ಭಾಗದ ಆಸ್ತಿಯ ಹಣವನ್ನು ಪಡೆದು ಆಸ್ತಿಗಳನ್ನು ನಮಗೆ ಬಿಟ್ಟುಕೊಟ್ಟು ಹೋದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. 3 ನೇ ಪ್ರತಿವಾದಿಗೆ ಕುಡಿಯುವ , ತಂಬಾಕು ಹಾಕುವ ದುಷ್ಚಟಗಳು ಇರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಇವತ್ತಿಗೂ ಸಹ 3 ನೇ ಪ್ರತಿವಾದಿ ನಮ್ಮ ಜೊತೆಗೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಮದುವೆಯ ಮಾತುಕತೆಯಲ್ಲಿ 3 ನೇ ಪ್ರತಿವಾದಿಯೂ ಸಹ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಕುಡಿಯುವ , ತಂಬಾಕು ಹಾಕುವ ದುಷ್ಚಟಗಳು ಇದ್ದುದರಿಂದ ನಾನೇ ಮುಂದೆ ನಿಂತು 1 ನೇ ವಾದಿಯ ಮದುವೆ ಮಾತುಕತೆನಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿಯವರ ಮದುವೆಗೆ 6 ತೊಲ ಬಂಗಾರವನ್ನು ನಾನು ಕೊಡಿಸಿರುತ್ತೇನೆ. 3 ನೇ ಪ್ರತಿವಾದಿಯವರನ್ನು ನಮಗೆ ಬೇಕಾದಂತೆ ಬಳಸಿಕೊಂಡು ವಾದಿಯವರಿಗೆ ಮೋಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯವರಿಗೆ ನ್ಯಾಯಾಲಯದಿಂದ ಹೋದ ಸಮನ್ಸ ಮಾಗೋಡ ವಿಳಾಸದಲ್ಲಿ ಜಾರಿಯಾಗಿರುತ್ತದೆ ಎಂದರೆ ಸಾಕ್ಷಿ ಫೋನ್ ಮಾಡಿ ಅವನನ್ನು ಅಲ್ಲಿಗೆ ಕರೆಸಿಕೊಂಡು ಸಮನ್ಸ ಜಾರಿ ಮಾಡಿರುತ್ತಾರೆ ಎಂದು

ಹೇಳುತ್ತಾರೆ. ಪೋಸ್ಟ ಮ್ಯಾನ್ ಆತನಿಗೆ ಕರೆ ಮಾಡಿ ಕರೆಸಿಕೊಂಡು ಸಮನ್ಸ ಜಾರಿ ಮಾಡಿರುತ್ತಾರೆ. 3 ನೇ ಪ್ರತಿವಾದಿ ನಮ್ಮ ಜೊತೆಗೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.